ಶ್ರೀ ಆರ್. ಎಸ್ ನಡೋಣಿ.—ಬೆಳಗಾಂ ಜಿಲ್ಲೆಯ ಆಯಕಟ್ಟಿನ ರಸ್ತೆಗಳ ರಿಪೇರಿ ಸಲುವಾಗಿ ಅಲ್ಲಿನ ಮುಖ್ಯ ಇಂಜಿನಿಯರ್‌ರವರನ್ನು ಕೇಳಿದ್ದಕ್ಕೆ ಅವರು ನಮ್ಮ ಹತ್ತಿರ ಹಣ ಇಲ್ಲ ಎಂದರು. ಆದ್ದರಿಂದ, ಆಯಕಟ್ಟಿನ ರಸ್ತೆಗಳ ರಿಪೇರಿಗಾಗಿ ಹಣ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಆರ್. ಗುಂಡೂರಾವ್.—ಅವರು ಯಾವ ರೀತಿ ಹೇಳಿದರೋ ಗೊತ್ತಿಲ್ಲ. ನಾವು ಈಗಾಗಲೇ ಅವರಿಗೆ ಸುಮಾರು ೩೨ ಲಕ್ಷ ರೂಪಾಯಿಗಳನ್ನು ರಸ್ತೆಗಳ ರಿಪೇರಿ ಸಲುವಾಗಿ ಕೊಟ್ಟಿದ್ದೇವೆ. ಯಾವ ಯಾವ ರಸ್ತೆಗಳು ಪ್ರಧಾನವಾಗಿರುತ್ತವೋ ಅವುಗಳನ್ನು ತೆಗೆದುಕೊಂಡು ಕೆಲಸ ಮುಂದುವರಿಸುತ್ತಾರೆ.

ಶ್ರೀ ಆರ್. ಎಸ್. ನಡೋಣಿ — ೧೯೭೮ನೇ ಇಸವಿಯಲ್ಲಿ ರಾಯಬಾಗ್ ತಾಲ್ಲೂಕಿನಲ್ಲಿ ೨೫ ಕಿ.ಮೀ, ಚಿಕ್ಕೋಡಿಯಲ್ಲಿ ೪ ಕಿ.ಮೀ. ರಸ್ತೆ ರಿಪೇರಿಯಾಗಿದೆ. ೧೯೭೯ನೇ ಇಸವಿಯಲ್ಲಿ ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೀರಿ ನನ್ನ ತಾಲ್ಲೂಕಿನಲ್ಲಿ ೩ ಕಿ.ಮೀ. ಗಿಂತ ಹೆಚ್ಚು ರಸ್ತೆ ರಿಪೇರಿಯಾಗಿಲ್ಲ. ಆದ್ದರಿಂದ, ಈ ಸಾರಿ ಬಜೆಟ್ಟಿನಲ್ಲಾದರೂ ಹೆಚ್ಚಿಗೆ ಹಣ ಕೊಡುತ್ತೀರಾ ?

ಶ್ರೀ ಆರ್ ಗುಂಡೂರಾವ್.—ಕಡಿಮೆಯಾಗಿದ್ದರೆ ಪರಿಶೀಲಿಸೋಣ.

Detection of non-Payment of Taxes.

495. SMT S. PRAMILA (Chamarajapet).—Will the Minister of Transport and Minor Irrigation be pleased to state.—

(a) whether the Regional Transport Officer, Bangalore, Mr. M. Venkappa was transferred on earlier occasion for various reasons including the reason that in the case of M/s. Janatha Tourists, there was defalcation of non-payment of taxes for buses to the extent of more that Rs. 1, 00,000 or so :

(b) when was the case detected by the department ,

(c) whether the owner had to pay the maximum penalty as per law ;

(d) if so, whether the then Transport Commissioner, Mr. Chandrakerthi, has reduced the penalty of nearly a lakh rupees eventhough he was not competent to do so ;

(e) whether the Government intends to recover the same from the previous Transport Commissioner and suspend the concerned Regional Transport Officer ?

SRI M. M. J. SADYOJATHA (Minister for Transport and Minor Irrigation).—

(a) No.

(b) Fraudulent entries were noticed by the Regional Transport Officer on 30th December 1978.

(c) Yes.

(d) No.

(e) Does not arise.

ಕಂಪಾರಿ ಎಸ್. ಪ್ರಮಿಳ.—ಮಾನ್ಯ ಸಭಾಧ್ಯಕ್ಷರೇ, ಜನತಾ ಟೊರಿಸ್ಟ್ ಬಸ್ಸುಗಳ ಬಗ್ಗೆ ತೆರಿಗೆ ಪಾವತಿ ಮಾಡದೇ ಹಣ ದುರುಪಯೋಗದ ಕಾರಣಗಳೂ ಸೇರಿದಂತೆ ಹಿಂದಿನ ಸಂದರ್ಭಗಳ ಅನೇಕ ಕಾರಣಗಳಿಂದಾಗಿ ಬೆಂಗಳೂರು ಪ್ರಾದೇಶಿಕ ಸಾರಿಗೆ ಅಧಿಕಾರಿಯನ್ನು ವರ್ಗಾಯಿಸಿರುವುದು ನಿಜವೇ ಎಂದು ಕೇಳಿರುವ ನನ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಇಲ್ಲ ಎಂದು ಉತ್ತರ ನೀಡಿದ್ದಾರೆ. ಆದರೆ ಎರಡನೇ ಪ್ರಶ್ನೆಯಲ್ಲಿ ಮೊಕದ್ದಮೆಯನ್ನು ಯಾವಾಗ ಪತ್ತೆ ಮಾಡಲಾಯಿತು ಎಂದು ಕೇಳಿರುವುದಕ್ಕೆ ತಾರೀಖಿನ್ನು ಕೊಟ್ಟಿದ್ದಾರೆ. ಮೊದಲನೇ ಪ್ರಶ್ನೆಗೆ ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದಾರೆ, ಎರಡನೇ ಪ್ರಶ್ನೆಯ ಉತ್ತರದಲ್ಲಿ ತಾರೀಖಿನ್ನು ನೀಡಿ ಪ್ರಾದೇಶಿಕ ಸಾರಿಗೆ ಅಧಿಕಾರಿಯವರು ವಂಚನೆಯ ದಾಖಲಾತಿಯನ್ನು ಗಮನಿಸಿದ್ದಾರೆ ಎಂದು ಹೇಳುತ್ತಾರೆ. ಇದರಲ್ಲಿ ಯಾವುದು ನಿಜ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಇಲ್ಲಿ ನನ್ನ ಹತ್ತಿರ ಆ ಬಗ್ಗೆ ಒಂದು ದೊಡ್ಡ ಪಟ್ಟಿ ಇದೆ. ಇದನ್ನು ಓದುವುದಕ್ಕಾಗುವುದಿಲ್ಲ. ಸಭೆಯ ಮುಂದೆ ಬೇಕಾದರೆ ಇಡುತ್ತೇನೆ.

ಶ್ರೀಮತಿ ಎಸ್. ಪ್ರಮಿಳ.—ಮೊದಲನೆ ಪ್ರಶ್ನೆಗೆ ಇಲ್ಲ ಎನ್ನುತ್ತೀರಿ, ಎರಡನೇ ಪ್ರಶ್ನೆಗೆ ಹೌದು ಎಂದು ಹೇಳುತ್ತೀರಿ. ಇದರಲ್ಲಿ ಯಾವುದು ನಿಜ ಸ್ವಾಮಿ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ವರ್ಗಾವಣೆ ಆಗಿರುವುದು ನಿಜ.

ಶ್ರೀಮತಿ ಪ್ರಮಿಳ.—ಉತ್ತರದಲ್ಲಿ ಇಲ್ಲ ಎಂದು ಇದೆ. ಹಾಗಾದರೆ ಉತ್ತರ ತಪ್ಪೆ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಡಿಫಾಲ್ಕೇಷನ್ ಆಗಿರುವುದು ನಿಜ,

ಶ್ರೀಮತಿ ಎಸ್. ಪ್ರಮಿಳ.—ಹಾಗಾದರೆ ಮೊದಲನೆ ಉತ್ತರ ತಪ್ಪು ಎಂದು ಒಪ್ಪಿಕೊಳ್ಳುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಉತ್ತರ ಸರಿಯಾಗಿದೆ.

ಶ್ರೀಮತಿ ಎಸ್. ಪ್ರಮಿಳ.—ಯಾವುದು ಸರಿ ಹೌದು ಎಂಬುದು ಸರಿಯೋ ಇಲ್ಲ ಎಂಬುದು ಸರಿಯೋ ?

ಅಧ್ಯಕ್ಷರು.—ಒಂದನೇ ಪ್ರಶ್ನೆಗೆ ಕೊಟ್ಟಿರುವ ಉತ್ತರ ಸರಿ ಎಂದು ಹೇಳಿದ್ದಾರೆ.

ಶ್ರೀಮತಿ ಎಸ್. ಪ್ರಮಿಳ.—ಡಿಫಾಲ್ಕೇಷನ್ ಆಗಿದ್ದು ನಿಜ ಎಂದು ಹೇಳಿದ್ದಾರೆ. ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದಾರೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಮಾನ್ಯ ಸದಸ್ಯರಿಗೆ ಪಟ್ಟಿಯನ್ನು ಒದಗಿಸಿಕೊಡುತ್ತೇನೆ, ನೋಡಲಿ.

ಶ್ರೀಮತಿ ಎಸ್. ಪ್ರಮಿಳ.—ಒಂದು ಲಕ್ಷ ರೂಪಾಯಿ ಡಿಫಾಲ್ಕೇಷನ್ ಆಗಿದೆ ಎಂದು ಹೇಳುತ್ತೀರಿ. ಅವರಿಗೆ ಎಷ್ಟು ದಂಡ ಹಾಕಿದ್ದರು, ಯಾರು ಹಾಕಿದ್ದರು, ಇದರ ಬಗ್ಗೆ ಉತ್ತರ ಕೊಡುವುದಕ್ಕಾಗುತ್ತದೆಯೇ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—೫೦೦ ರೂಪಾಯಿ ದಂಡ ಹಾಕಿದ್ದರು,

ಶ್ರೀಮತಿ ಎಸ್. ಪ್ರಮಿಳ.—ಒಂದು ಲಕ್ಷ ರೂಪಾಯಿಗಿಂತ ಹೆಚ್ಚು ಪೆನಾಲ್ಟಿ ಹಾಕಿದ್ದಾರೆ. ಇದರ ಬಗ್ಗೆ ಅವರು ಆಪೀಲ್ ಹೋಗಿದ್ದಾರೆ. ನಂತರ ಹಿರಿಯ ಅಧಿಕಾರಿಗಳು ಅದನ್ನು ಕಡಿಮೆ ಮಾಡಿದ್ದಾರೆ. ನಿಮ್ಮ ಹತ್ತಿರ ಇರತಕ್ಕ ದಾಖಲೆಗಳು ಸರಿಯಿಲ್ಲವೋ ಅಥವಾ ಅಧಿಕಾರಿಗಳು ಕೊಟ್ಟಿರುವ ದಾಖಲೆಗಳು ಸರಿಯಿಲ್ಲವೋ, ಅಥವಾ ಅಧಿಕಾರಿಗಳಿಗೆ ವಿಷಯಗಳು ಸರಿಯಾಗಿ ಗೊತ್ತಿಲ್ಲವೋ ಏನೂ ಗೊತ್ತಾಗುತ್ತಿಲ್ಲ. ಸರ್ಕಾರಕ್ಕೆ ಬರತಕ್ಕ ಹಣವನ್ನು ಕಳೆದು ಕೊಳ್ಳುವುದಕ್ಕೆ ಅವಕಾಶ ಕೊಡಬೇಡಿ. ಏನಾದರೆ ಇನ್ನೂ ಸ್ವಲ್ಪ ಕಾಲಾವಕಾಶ ತೆಗೆದುಕೊಂಡು ನಿಧಾನವಾಗಿ ಉತ್ತರ ನೀಡಿ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ,

ಶ್ರೀ ಎಸ್. ಆರ್. ಬೊಮ್ಮಾಯಿ.—ಕಮೀಷನರ್ ಚಂದ್ರಕೀರ್ತಿಯವರು ಒಂದು ಲಕ್ಷ ರೂಪಾಯಿ ಪೆನಾಲ್ಟಿ ಹಾಕಿದ್ದಾರೆ ಎಂದು ಹೇಳುತ್ತಾರೆ. ಹಾಕಿದ್ದಾರೋ ಇಲ್ಲವೋ ?

ಶ್ರೀ ಎಂ ಎಂ. ಜೆ. ಸದ್ಯೋಜಾತ.—ನೋಟೀಸ್ ಬೇಕು.

ಶ್ರೀ ಎಸ್. ಆರ್ ಬೊಮ್ಮಾಯಿ.—ಮಾನ್ಯ ಅಧ್ಯಕ್ಷರಲ್ಲಿ ನಾನು ಕೇಳಿಕೊಳ್ಳುತ್ತೇನೆ ದಯವಿಟ್ಟು ಈ ಪ್ರಶ್ನೆಯನ್ನು ತಡೆಹಿಡಿಯಿರಿ ಪ್ರಶ್ನೆಗೆ ಸರಿಯಾಗಿ ಉತ್ತರ ನೀಡುವುದಕ್ಕಾಗದೇ ನೋಟೀಸ್ ಬೇಕು ಎಂದು ದಯವಿಟ್ಟು ತಡೆಹಿಡಿಯುವುದು ಒಳ್ಳೆಯದು. ಬೇಕಾದರೆ ವಿಷಯಗಳನ್ನು ಚೆನ್ನಾಗಿ ತಿಳಿದು ಕೊಂಡುಬಂದು ನಾಳೆ ಹೇಳಲಿ ಕಮಿಷನರ್ ಚಂ ದ್ರಶೇರ್ತಿಯವರು ದಂಡವನ್ನು ಕಡಿಮೆ ಮಾಡಲು ಸಮರ್ಥರಲ್ಲದಿದ್ದರೂ ದಂಡವನ್ನು ಒಂದು ಲಕ್ಷ ರೂಪಾಯಿಗಳವರೆಗೆ ಕಡಿಮೆಗೊಳಿಸಿರುವುದು ನಿಜವೇ ಎಂದು ಸ್ಪಷ್ಟವಾಗಿ ಕೇಳಿದ್ದಾರೆ. ಅದಕ್ಕೆ ಉತ್ತರ ನೀಡಲು ನೋಟೀಸ್ ಬೇಕು ಎಂದರೆ ಕಷ್ಟವಾಗುತ್ತದೆ. ಮಾನ್ಯ ಮಂತ್ರಿಗಳು ಕಾಲಾವಕಾಶ ತೆಗೆದುಕೊಂಡು ನಾಳೆ ಉತ್ತರ ಹೇಳಲಿ.

MR. SPEAKER.—I withhold this question.

Employment Affirmation Scheme in Koratagere Taluk. Tumkur District.

499. SRI T. B. JAYACHANDRA (Kallambella).—Will the Minister for Finance and Planning be pleased to state.—

(a) whether it is a fact that Employment Affirmation Scheme works were undertaken in all the Village Panchayats in Koratagere Taluka in 1979 ;

(b) whether it is also a fatct that Employment Affirmation Scheme works were executed in more than one Village in every Village Panchayat in Koratagere Taluk during 1979 ;

(c) if so, the name of the village and name of work executed in each village ;

(d) the amount sanctioned to each work ;

e) amount actually spent on each work ;

(f) both cash and grain component and total amount spent in each work ;

(g) the total number of labourers employed in each work ;

(h) the total number of days each work was executed ;

(i) the average number of labourers employed per day in each work ;

SRI M. VEERAPPA MOILY (Minister for Finance and Planning),—

(a) Yes.

(b) Yes.

(c) (c) to (i) Statement laid on the table*

---

* Copy placed in the Karnataka Legislature Libray vide No. 21 Date 17th June 1980.